ಶ್ರೀ ಎಸ್. ಎಂ. ಕೃಷ್ಣ.—ಸರಕಾರದವರು ೧೯೭೩ನೇ ಇಸವಿಯಲ್ಲಿ ೨೫ ವರ್ಷಗಳ ಒಂದು ಅಗ್ರಿಮೆಂಟನ್ನು ಮಾಡಿಕೊಂಡು, ಅದರಂತೆ ವರ್ಷಕ್ಕೆ ೫೦ ಸಾವಿರ ಟನ್ ಬಿದಿರನ್ನು ಈ ಕಾರಖಾನೆಗೆ ಸರಬರಾಯಿ ಮಾಡಲಾಗುತ್ತಿದೆ. ಆದರೆ ಈಗ ನಮ್ಮ ಪೇಪರ್ ಮಿಲ್ಲಿನ ಉತ್ಪಾದನಾ ಶಕ್ತಿ ಪ್ರಕಾರ ೨೪ ಸಾವಿರ ಟನ್ ಪೇಪರನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದ್ದರೂ ದೊರೆಯುತ್ತಿರುವ ಬಿದಿರಲ್ಲಿ ೧೮ ಸಾವಿರ ಟನ್ ಪೇಪರನ್ನು ಮಾತ್ರ ಮಾಡುವುದಕ್ಕೆ ಸಾಧ್ಯ ಇದೆ. ಆದುದರಿಂದ ಈಗ ಈ ಬಿದುರಿನ ಸರಬರಾಯಿ ಬಗ್ಗೆ ಹೆಚ್ಚು ಬಿದಿರನ್ನು ಸರಬರಾಯಿ ಮಾಡಲು ಹೊಸ ಒಪ್ಪಂದ ಮಾಡುವುದಕ್ಕೆ ಪ್ರಯತ್ನಗಳಾಗುತ್ತಿವೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ.—ವಿವಿಧ ಮೂಲಗಳಿಂದ ಸರಬರಾಯಿ ಆಗುತ್ತಿರುವ ಬಿದಿರಿನ ರೇಟಿಗೂ ಮತ್ತು ಅದರ ಸಾಗಾಣಿಕೆ ವೆಚ್ಚಕ್ಕೂ ಹೋಲಿಸಿದರೆ ಬಿದಿರಿಗಿಂತ ಬಿದಿರನ್ನು ಸಾಗಿಸತಕ್ಕ ದಶವೇ ಜಾಸ್ತಿ ಇರುವುದರಿಂದ ಇದನ್ನು ತಗ್ಗಿಸುವುದಕ್ಕೇನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇತ್ತೀಚೆಗೆ ಪೆಟ್ರೋಲ್-ಡಿಸೇಲ್ ಆಯಿಲ್ ಇತ್ಯಾದಿ ಎಲ್ಲ ಎಣ್ಣೆಗಳ ಬೆಲೆಯೂ ಜಾಸ್ತಿಯಾಗಿರುವಾಗ ಇದನ್ನು ತಗ್ಗಿಸುವುದಕ್ಕೆ ಸಾಧ್ಯವೇ ಇಲ್ಲ. ಮಾನ್ಯ ಸದಸ್ಯರು ಅಂಥ ದಾರಿ ಏನಾದರೂ ಇದ್ದಲ್ಲಿ ತೋರಿಸಿಕೊಟ್ಟರೆ ಇದನ್ನು ಕಮ್ಮಿ ಮಾಡುವುದಕ್ಕೆ ಪ್ರಯತ್ನ ಮಾಡಲಾಗುವುದು.

Sri ABDUL KHUDDUS ANWAR.—Will the Government consider increasing the production of paper by supplying soft wood, Nilgiri trees and maintain the production ?

Sri S. M. KRISHNA.—Madam Speaker, I share the anxiety of the Hon. Member who represents the Bhadravathi Constituency. This year so far we have got 27,261 tonnes of bamboos as against the contract of 50,000 tonnes. This is causing us a considerable alarm, and distress and I am sure my colleague, the Minister for Forest, would look into this and help us out of this predicament.

CORPORATION FOR CONSTRUCTION OF BRIDGES

388. Sri JAYAPRAKASH SHETTY (Brahmavar).—

Will the Minister for Public Works and Electricity be pleased to state :—

(*a*) the stage at which the proposal regarding formation of autonomous Corporation for the construction of bridges in the State is pending;

(*b*) whether the Government has prepared a list of bridges to be constructed in the State under the Scheme and the total estimated amount required for the purpose;

(*c*) the manner in which the Government proposes to provide finance for the implementation of the policies and programmes of the Corporation ?

Sri H. M. CHANNABASAPPA (Minister for Public Works and Electricity) :

(*a*) A Committee has been constituted by the State Government to work out the details of this proposal. The report of the Committee is awaited.

(*b*) A tentative list has been got up; approximately Rs. 55 crores.

(*c*) Does not arise in view of reply to Clause (*a*) of the Question.

ಶ್ರೀ ಜಯಪ್ರಕಾಶ ಶೆಟ್ಟಿ:—ಇಲ್ಲಿ ಹೇಳಿರತಕ್ಕ ಸಮಿತಿಯ ಸದಸ್ಯರುಗಳು ಯಾರು ಮತ್ತು ಅವರು ಯಾವಾಗ ಸರಕಾರಕ್ಕೆ ವರದಿಯನ್ನು ಸಲ್ಲಿಸುತ್ತಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ಸದಸ್ಯರು ಯಾರು ಯಾರು ಎಂದರೆ.—ಕಮಿಶನರ್ ಫಾರ್ ಪಿ.ಡಬ್ಲ್ಯು.ಡಿ. ಅಂಡ್ ಎಲೆಕ್ಟ್ರಿಸಿಟಿ; ಎಕನಾಮಿಕ್ ಅಡ್ವೈಜರ್ ಟು ಗೌರ್ನಮೆಂಟ, ಚೀಫ ಇಂಜೆನಿಯರ ಪಿ. ಆ್ಯಂಡ್ ಬಿ. ಮತ್ತು ಜೆಪ್ಯುಟಿ ಸೆಕ್ರೆಟರಿ ಪಿ. ಆ್ಯಂಡ್ ಬಿ. ಇವರು ಸದಸ್ಯರು. ಈ ತಿಂಗಳ ಕೊನೆಯಲ್ಲಿ ವರದಿ ಸರಕಾರಕ್ಕೆ ಬರುವ ನಿರೀಕ್ಷಣೆ ಇದೆ.

Sri JAYAPRAKASH SHETTY:—May I know the purpose and advantage in forming an autonomous Corporation for construction of bridges ?

Sri H. M. CHANNABASAPPA:—The purpose is it will help us to mobilise resources.

ಶ್ರೀ ಎ. ಜಿ. ಕೊಡಗಿ:—ಮಲೆನಾಡಿನಲ್ಲಿರತಕ್ಕ ರಸ್ತೆಗಳಿಗೆಲ್ಲಾ ಎಲ್ಲೆಲ್ಲಿ ಸೇತುವೆ ಆಗತ್ಯವಿದೆ ಅವುಗಳನ್ನೆಲ್ಲಾ ಎರಡು ವರ್ಷಗಳೊಳಗಾಗಿ ಮಾಡಿಸುವುದಾಗಿ ತಾವು ವಾಗ್ದಾನ ಮಾಡಿದ್ದರೂ ಇನ್ನೂ ಕಾರ್ಯಗತವಾಗಲಿಲ್ಲ. ನಿರ್ದಿಷ್ಟವಾಗಿ ಇನ್ನೆಷ್ಟು ದಿನಗಳಲ್ಲಿ ಮಾಡಿಸುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ—ಇದಕ್ಕೆ ಮುಖ್ಯವಾಗಿ ಬೇಕಾದ ಹಣವನ್ನು ಕೂಡಿಸಬೇಕಾಗಿದೆ. ಅದಕ್ಕಾಗಿ ಒಂದು ಸಮಿತಿಯನ್ನು ಕೂಡ ನೇಮಕ ಮಾಡಿದ್ದಾಗಿದೆ. ಆ ಕಮಿಟಿ ವರದಿ ಇನ್ನೂ ೫-೬ ದಿನಗಳಲ್ಲೇ ಸರ್ಕಾರದವರ ಕೈ ಸೇರಲಿದೆ. ಅದು ಬಂದ ನಂತರ ಇದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಜಿ. ಎಂ. ಮಂಜುನಾಥ್—ಈ ಯೋಜನೆಯಲ್ಲಿ ಕೆಲವು ಹಳ್ಳಿಗಳಿಗೆ ಸಂಬಂಧಪಟ್ಟ ರಸ್ತೆಗಳೂ ಬರುತ್ತವೆ. ಅಂಥ ರಸ್ತೆಗಳಲ್ಲಿರತಕ್ಕ ಸೇತುವೆಗಳನ್ನೂ ಸರ್ಕಾರದವರು ಮಾಡಿಸುತ್ತಾರೆಯೇ ಅಥವಾ ಬರಿ ಪಿ. ಡಬ್ಯು. ಡಿ. ಗೆ ಸೇರಿದ ರಸ್ತೆಗಳಲ್ಲಿರತಕ್ಕ ಸೇತುವೆಗಳನ್ನು ಮಾತ್ರ ಕೈಗೊಳ್ಳುತ್ತಾರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ:—ತಾಲ್ಲೂಕ್ ಬೋರ್ಡ್ ಮತ್ತು ಗ್ರಾಮಪಂಚಾಯತಿಗಳ ಸರಹದ್ದಿನಲ್ಲಿರತಕ್ಕ ಕೆಲಸಗಳನ್ನುಳಿದು ಬಾಕಿ ಕೆಲಸಗಳನ್ನು ಪಿ. ಡಬ್ಲ್ಯು. ಡಿ. ಮೂಲಕ ಮಾಡಿಸಬೇಕೆಂಬ ವಿಚಾರವಿದೆ. ರೂರಲ್ ಕಮ್ಯುನಿಕೇಷನ್ನಿನಲ್ಲಿ ಯಾವ ಯಾವು ೧೦೦ ಲೀನಿಯರ್ ಅಡಿಯೊಳಗೆ ಇರುತ್ತವೆಯೋ ಅವುಗಳೆಲ್ಲಾ ಈ ಸ್ಕೀಮಿನೊಳಗೆ ಬರುತ್ತವೆ. ಈ ಎಲ್ಲ ಸೇತುವೆಗಳನ್ನು ಒಂದು ಫೇಸ್ಡ ಪ್ರೊಗ್ರಾಮ ಪ್ರಕಾರ ೭—೮ ವರ್ಷಗಳಲ್ಲಿ ಮುಗಿಸಿ ಅನುಕೂಲ ಮಾಡತಕ್ಕ ಒಂದು ಯೋಜನೆಯನ್ನು ಸರಕಾರ ತಯಾರಿಸಿದೆ. ಅದರಂತೆ ಈ ಕೆಲಸಕ್ಕೆ ಬೇಕಾಗುವ ಹಣವನ್ನು ಬೇರೆ ಕಡೆಯಿಂದ ಸಾಲವಾದರೂ ಮಾಡಿ ಕೆಲಸಗಳನ್ನು ಮುಗಿಸಿ ಅಲ್ಲಲ್ಲೇ ಸುಂಕದ ಕಟ್ಟೆಗಳನ್ನಿಟ್ಟು ಆ ಸಾಲವನ್ನು ತೀರಿಸುವುದಕ್ಕೆ ಒಂದು ಯೋಜನೆಯನ್ನು ತಯಾರಿಸಿದೆ. ಇದಕ್ಕಾಗಿ ನೇಮಕ ಮಾಡಿರತಕ್ಕ ಸಮಿತಿಯ ವರದಿ ಬಂದ ಕೂಡಲೇ ಮುಂದಿನ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಕೋಣಂದೂರು ಲಿಂಗಪ್ಪ:—ಇಲ್ಲಿ ಒದಗಿಸಿರತಕ್ಕ ಉತ್ತರ ನೋಡಿದರೆ ಹಳ್ಳಿಗಳ ಬಗ್ಗೆ ಸರ್ಕಾರಕ್ಕೆ ಕಳಕಳಿಯಿಲ್ಲ ಎಂದು ಕಾಣುತ್ತದೆ. ಈ ಸೇತುವೆಗಳನ್ನು ಖಂಡಿತ ಎಷ್ಟು ದಿವಸಗಳಲ್ಲಿ ಮಾಡಿಸಲಾಗುತ್ತದೆಂಬುದಕ್ಕೆ ಇವರೇನು ಭರವಸೆ ಕೊಡುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ:—ಆದಷ್ಟು ಬೇಗ ಮಾಡಿಸಲಾಗುತ್ತದೆ. ಇಲ್ಲಿಯ ಸೇತುವೆಗಳಲ್ಲಿ ಒಂದೊಂದಕ್ಕೂ ವೆಚ್ಚ ೫ ಲಕ್ಷದಿಂದ ಹಿಡಿದು ೭೫ ಲಕ್ಷ ರೂಪಾಯಿಗಳ ವರೆಗೂ ಏರುತ್ತದೆ. ಈ ಸೇತುವೆಗಳೆಲ್ಲಾ ದೇಶದ ಆರ್ಥಿಕ ಪರಿಸ್ಥಿತಿಯನ್ನು ಬೆಳೆಸತಕ್ಕವುಗಳು ಎಂಬುದು ಸರಕಾರಕ್ಕೂ ಗೊತ್ತಿದೆ. ವರ್ಷಕ್ಕೆ ಐದಾರು ಕೋಟಿ ರೂಪಾಯಿಗಳಂತೆ ಖರ್ಚು ಮಾಡುತ್ತಾ ೬—೭ ವರ್ಷಗಳಲ್ಲಿ ಈ ಎಲ್ಲಾ ಸೇತುವೆಗಳನ್ನೂ ಮುಗಿಸಬೇಕೆಂಬ ಯೋಜನೆ ಇದೆ. ಇದಕ್ಕೆ ಅಂದಾಜು ೭೫ ಕೋಟಿ ರೂಪಾಯಿಗಳು ಬೇಕಾಗುತ್ತವೆ.